

ಬಿದರೆ ಕಲ್ಲು ಬಾವಿಯ ಪುನಶ್ಚೇತನದ ಪ್ರಯತ್ನ

ಸಂತರು. ತನ್ಮೂಲಕ ಹಸಿರು ಸೃಷ್ಟಿಸಿ ಸುತ್ತಲಿನ ಹಳ್ಳಿಗಳಿಗೆ ಜೀವ ಚೈತನ್ಯ ತುಂಬಿದ್ದಾರೆ. ಶ್ರೀ ರವಿಶಂಕರ್ ಗುರೂಜಿಯವರ 'ಆರ್ಟ್ ಆಫ್ ಲಿವಿಂಗ್' ಸಂಸ್ಥೆಯ ವತಿಯಿಂದ ಜಲಸಂರಕ್ಷಣೆಯ ಕೆಲ ಕೆಲಸಗಳಾಗಿವೆ. ಚಿಕ್ಕಮಗಳೂರು, ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳ ವೇದಾವತಿ ಕೊಳ್ಳದ 1097 ಗ್ರಾಮಗಳನ್ನೊಳಗೊಂಡ ಕೆರೆಗಳಲ್ಲಿ 6786 ಇಂಗುಗುಂಡಿ ಹಾಗೂ ಅಡ್ಡಗಟ್ಟೆಗಳನ್ನು ಕಟ್ಟಲಾಗಿದೆ. ಇದರಿಂದಾಗಿ ಆ ಭಾಗಗಳಲ್ಲಿ ಅಂತರ್ಜಲ ಪ್ರಮಾಣ ಹೆಚ್ಚಾಗಿದೆ.

ತುಮಕೂರು ಜಿಲ್ಲೆಯಾದ್ಯಂತ 2000ಕ್ಕೂ ಅಧಿಕ ಪಾರಂಪರಿಕ ಜಲಮೂಲಗಳಾದ 'ತಲಪರಿಕೆ'ಗಳು ದಾಖಲಾಗಿದ್ದವು. ಜನರ ನಿರ್ಲಕ್ಷ್ಯದಿಂದ ಇತ್ತೀಚೆಗಿನ ವರ್ಷಗಳಲ್ಲಿ ಅವು ಪಾಳು ಬಿದ್ದಿದ್ದವು. ಜಲಕಾರ್ಯಕರ್ತ ಮಲ್ಲಿಕಾರ್ಜುನ ಹೊಸಪಾಳ್ಯ ಅವರು ತಮ್ಮ 'ಧನ್ಯ' ಸ್ವಯಂಸೇವಾ ಸಂಸ್ಥೆಯ ಮೂಲಕ ದಶಕದಿಂದ ತಲಪರಿಕೆಗಳ ಪುನಶ್ಚೇತನದಲ್ಲಿ ಅವಿರತ ತೊಡಗಿ, ಹಲವಾರು ತಲಪರಿಕೆಗಳಿಗೆ ಮರುಜೀವ ನೀಡಿದ್ದಾರೆ. ಮೊನ್ನೆಯಷ್ಟೇ ಬಂಟ್ವಾಳ ತಾಲ್ಲೂಕಿನ ಅಡ್ಯನಡ್ಕ ಸಮೀಪದ ಅಮೈ ಮಹಾಲಿಂಗ ನಾಯ್ಕ, ಪದ್ಮಶ್ರೀ ಮುಕುಟವನ್ನು ಮುಡಿಗೇರಿಸಿಕೊಂಡಿದ್ದಾರೆ. ಗುಡ್ಡಕ್ಕೆ ಸುರಂಗ ಕೊರೆದು, ನೀರು ತೆಗೆದು ಕೃಷಿ ಮಾಡಿದ್ದು ಇವರ ಅದ್ಭುತ ಸಾಹಸವಾಗಿದೆ.

ಹಾಸನದ 'ಹಸಿರುಭೂಮಿ' ಪ್ರತಿಷ್ಠಾನ ಐದು ವರ್ಷಗಳ ಹಿಂದೆ ತೀವ್ರ ಬರ, ರೈತರ ಆತ್ಮಹತ್ಯೆ ನೀಗಿಸುವ ಪ್ರಯತ್ನದಲ್ಲೇ ಹುಟ್ಟಿಕೊಂಡದ್ದು! ಪಾರಂಪರಿಕ ಜಲಮೂಲಗಳ ಪುನಶ್ಚೇತನ ಹಾಗೂ ಹಸುರೀಕರಣದ ಧ್ಯೇಯದೊಂದಿಗೆ ಅವಿರತವಾಗಿ ರಚನಾತ್ಮಕ ಕೆಲಸದಲ್ಲಿ ತೊಡಗಿದೆ. ಹಸಿರುಭೂಮಿ ಪ್ರತಿಷ್ಠಾನದ ಪ್ರೇರಣೆ, ಮಾರ್ಗದರ್ಶನ, ಅಲ್ಲಲ್ಲೇ ಮಾಡಿದ ಕೆರೆ ಅಭಿವೃದ್ಧಿ ಸಮಿತಿ, ಜನಸಮುದಾಯದ ಮುಂದಾಳತ್ವದಿಂದಾಗಿ, ಸದ್ಯ ಜಿಲ್ಲೆಯ 14 ಕೆರೆಗಳು, 60ಕ್ಕೂ ಹೆಚ್ಚು ಕಲ್ಯಾಣಿಗಳು ಪುನಶ್ಚೇತನಗೊಂಡಿವೆ. ಇಲ್ಲಿ ನೀರಿನ ಸಂಗ್ರಹಣೆ ಗಮನಾರ್ಹವಾಗಿ ಹೆಚ್ಚಾಗಿರುವುದು ಸಂತಸದ ಸಂಗತಿ.

ಖ್ಯಾತ ಜಲತಜ್ಞರಾದ ಶ್ರೀಪಡ್ರೆಯವರು ಕರ್ನಾಟಕ ಮತ್ತು ಕೇರಳ ರಾಜ್ಯದ, ಕಾಸರಗೋಡು ಜಿಲ್ಲೆಯ, ಗಡಿಗ್ರಾಮದವರು. ಜಲಸಂರಕ್ಷಣೆಯ ಅನೇಕ ಮಾದರಿಗಳ ಕುರಿತು ದಶಕಗಳಿಂದ ದಾಖಲೀಕರಣ, ಜಾಗೃತಿ, ಪ್ರಚಾರದಲ್ಲಿ ತೊಡಗಿದ್ದಾರೆ. ಬಿದ್ದ ಸ್ಥಳದಲ್ಲೇ ಮಳೆ ನೀರಿಂಗಿಸಿ ಜಲಸಂರಕ್ಷಿಸುವ ಪಾರಂಪರಿಕ 'ಮದಗ'ಗಳು ಹಾಗೂ ಮರಳು ಚೀಲಗಳನ್ನು ಬಳಸಿ ನೀರಿನ ಸಂಗ್ರಹ ಹೆಚ್ಚಿಸುವ 'ಕಟ್ಟ'ಗಳ, ವಿವಿಧ ಮಾದರಿಗಳ ಮರುನಿರ್ಮಾಣದಲ್ಲಿ ಇತ್ತೀಚಿಗಿನ ವರ್ಷಗಳಲ್ಲಿ ತಳಮಟ್ಟದಲ್ಲಿ ತೊಡಗಿಕೊಂಡಿದ್ದಾರೆ. ಹೀಗಾಗಿ ಪಡ್ರೆ ಗ್ರಾಮದ ಸುತ್ತಮುತ್ತಲು ಹೊಸದಾಗಿ 12–15 ಕಟ್ಟಗಳ ನಿರ್ಮಾಣ ಆಗಿದೆ. ಇದು ಅತ್ಯಂತ ಕಡಿಮೆ ಖರ್ಚಿನ, ಕಡಿಮೆ ಕೆಲಸದ, ತಾತ್ಕಾಲಿಕ ನೀರು ಸಂಗ್ರಹಣಾ ವಿಧಾನವಾದ್ದರಿಂದ ಜನರ ಆಕರ್ಷಣೆಗೆ ಕಾರಣವಾಗಿದೆ. ದಕ್ಷಿಣ ಕನ್ನಡದ ರೈತರಾದ ನಿಟಿಲೆ ಮಹಾಬಲೇಶ್ವರ ಭಟ್ ಮತ್ತಿತರ ಒಂದಿಬ್ಬರು ರೈತರು, ಕಬ್ಬಿಣದ ರಿಂಗ್ ಬಳಸಿ ಹೊಸ ಮಾದರಿಯ, ದೀರ್ಘ ಬಾಳಿಕೆ ಬರುವ ಕಟ್ಟವನ್ನು ನಿರ್ಮಿಸಿದ್ದಾರೆ. ಅಲ್ಲಿ ಹೆಚ್ಚಿನ ಮಳೆನೀರಿನ ಸಂಗ್ರಹ ಸಾಧ್ಯವಾಗಿದೆ. ಇದನ್ನು ಅಧ್ಯಯನ ಮಾಡಲು ಕಾಸರಗೋಡಿನ ವಿಶೇಷ ಅಧಿಕಾರಿಗಳ ತಂಡ ಬಂದು, ಪ್ರೇರೇಪಿತರಾಗಿ ಕಾಸರಗೋಡು ಜಿಲ್ಲೆಯ ಸಾವಿರ ಕಡೆಗಳಲ್ಲಿ ಇಂತಹ ರಿಂಗ್ ಬಳಸಿ ಕಟ್ಟಗಳ ನಿರ್ಮಾಣದಲ್ಲಿ ನಿರತರಾಗಿದ್ದಾರೆ! ಇಲ್ಲಿ ಹೆಚ್ಚಿನ ಮಳೆನೀರು ಸಂಗ್ರಹದಿಂದ ಅಂತರ್ಜಲವೂ ಹೆಚ್ಚಾಗಿದೆ. ಕುಡಿಯುವ ನೀರನ್ನು ಟ್ಯಾಂಕರ್‌ಗಳ ಮೂಲಕ ಸರಬರಾಜು ಮಾಡುವುದು ತಪ್ಪಿರುವುದರಿಂದ ಆಡಳಿತಕ್ಕೆ ಹೊಸ ಭರವಸೆ